**ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಉಪಾಧ್ಯಕ್ಷರೆ, ಈ ಹಿಂದೆ ನಾನು ಹಾಗೂ ಜಾಲಪ್ಪನವರು ಸಮೀಕ್ಷೆ ಮಾಡಲು ಹೇಳಿದ ಸಂದರ್ಭದಲ್ಲಿ ಶಾಸಕರಾದ ಮಾನ್ಯ ಗಂಗಹನುಮಯ್ಯನವರು ಈ ವಿಷಯ ಪ್ರಸ್ತಾಪಿಸಿದ್ದರು. ಇದು ನೇರವಾಗಿ ಕಂದಾಯ ಇಲಾಖೆಗೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಸಂಬಂಧಿಸಿದೆ. ಶ್ರೀಮತಿ ಸುಜಾತರವರು ಸ್ವಲ್ಪ ದಿವಸಗಳ ಕಾಲ ಅಲ್ಲಿ ಜಿಲ್ಲಾ ಆಡಳಿತಾಧಿಕಾರಿಯಾಗಿದ್ದರು, ಆ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳು ಉದ್ಭವಿಸಿದ್ದು ನಂತರ ಅವರು ಜಿಲ್ಲಾಧಿಕಾರಿಗಳಾಗಿದ್ದರು. ಪ್ರಾಯಶಃ ಅವರು ಪತ್ರವನ್ನು ಬರೆದು ಕಳುಹಿಸಿದನಂತರ ಅವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ನಿರ್ದೇಶಕರಾಗಿ ವರ್ಗವಾಗಿ ಹೋದರು. ಆದುದರಿಂದ, ದಯಮಾಡಿ ತಾವು ಆ ಕುರಿತ ಮಾಹಿತಿಯನ್ನು ಕಳುಹಿಸಿಕೊಟ್ಟರೆ ನಾನು ಮತ್ತು ಕಂದಾಯ ಇಲಾಖೆಯ ಮಂತ್ರಿಗಳು ಗಮನಿಸಿ ಅದಕ್ಕೆ ಉತ್ತರ ಕಳುಹಿಸಿಕೊಡುತ್ತೇನೆ.

**ಶ್ರೀ ವಾಟಾಳ್ ನಾಗರಾಜ್:-** ಇವೊತ್ತು ನಮಗೆ ಒಂದು ರೀತಿಯ ದಿಗಿಲು ಬಂದಂತಾಗಿದೆ ಕೃಷ್ಣಾ ಯೋಜನೆಗೆ. . .

**ಉಪಾಧ್ಯಕ್ಷರು:-** ತಾವು ಶಿಕ್ಷಣ ಬಗ್ಗೆ ಮಾತನಾಡುತ್ತೇನೆಂದು ಹೇಳಿದ್ದೀರಲ್ಲಾ.

**(ಊ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರದಿಂದ ಧನ ಸಹಾಯ.**

**+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-** ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ 200 ಕೋಟಿ ರೂಪಾಯಿಗಳಷ್ಟು ಹಣವನ್ನು ಸಹಾಯ ಮಾಡುತ್ತದೆಂದು ನಮ್ಮ ಸರ್ಕಾರ ಭಾರಿ ನೀರಾವರಿ ಸಚಿವರು ಈಗಾಗಲೇ ಅನೇಕ ಕಡೆಗಳಲ್ಲಿ ಹೇಳಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ತಿಳಿದು ಬಹಳ ಸಂತೋಷವಾಗಿತ್ತು. ಆದರೆ, ಪ್ರಧಾನಮಂತ್ರಿಗಳು ಆ ಹಣವನ್ನು ಇನ್ನೂ ಮಂಜೂರು ಮಾಡಿಲ್ಲವೆಂಬ ಬಗ್ಗೆ ಒಂದು ಕಡೆ ಹೇಳಿದ್ದರೆ ಮತ್ತೊಂದು ಕಡೆ ಕರ್ನಾಟಕಕ್ಕೆ ಆ ಹಣವನ್ನು ಬಿಡುಗಡೆ ಮಾಡುವುದಾದರೆ ಸಂಯುಕ್ತ ರಂಗಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದು ಕೊಳ್ಳಬೇಕಾಗುತ್ತದೆಂಬ ಬೆದರಿಕೆಯನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಒಡ್ಡುತ್ತಿದ್ದು, ಇದು ಒಳ್ಳೆಯ ನೀತಿಯಲ್ಲ. ಆ ಬೆದರಿಕೆಯ ತಂತ್ರಕ್ಕೆ ಕರ್ನಾಟಕವಾಗಲೀ, ಕೇಂದ್ರ ಸರ್ಕಾರವಾಗಲೀ ಬಗ್ಗಬಾರದು. ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ 200 ಕೋಟಿ ರೂಪಾಯಿಗಳನ್ನು ಕೊಡುತ್ತದೆಂದು ಏನು ಹೇಳಿದ್ದಾರೆ, ಅದಕ್ಕೆ ಕಟ್ಟುಬಿದ್ದು ನಿಲ್ಲಬೇಕು. ಕೃಷ್ಣಾ ಯೋಜನೆಯ ಕಾಮಗಾರಿಗಳು ಮುಗಿಸುವುದಕ್ಕೆ ಕೇಂದ್ರ ಸರ್ಕಾರದಿಂದ ನಮಗೆ 200 ಕೋಟಿ ರೂಪಾಯಿಗಳಷ್ಟು ಹಣ ಬರುತ್ತಿದೆಯೆಂದು ಈಗಾಗಲೇ ಸನ್ಮಾನ್ಯ ಭಾರಿ ನೀರಾವರಿ ಸಚಿವರು ರಾಜ್ಯಾದ್ಯಂತ ಹೇಳಿರುವುದಲ್ಲದೆ, ಕೇಂದ್ರ ಸರ್ಕಾರ ನಮಗೆ ಭರವಸೆ ನೀಡಿದ್ದು ಆ ಹಣವನ್ನು ಕೊಟ್ಟೇ ಕೊಡುತ್ತದೆ ಎಂದು ಜಗಜ್ಜಾಹೀರು ಮಾಡಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಹೇಳಿದ ತಕ್ಷಣ ಪ್ರಧಾನಮಂತ್ರಿಯವರು ಏನು ಹೇಳುತ್ತಾರೆಂದರೆ, "ಕ್ಷಿಪ್ರ ನೀರಾವರಿ ಅಭಿವೃದ್ಧಿ

ಯೋಜನೆಯನ್ವಯ ವಿವಿಧ ರಾಜ್ಯಗಳ ಹಲವು ನೀರಾವರಿ ಯೋಜನೆಗಳಿಗೆ ಹಣ ನೀಡುವ ಬಗ್ಗೆ ಕೇಂದ್ರ ಸರ್ಕಾರ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ" ಈ ಯೋಜನೆ ಕುರಿತು ವಿವಿಧ ರಾಜ್ಯಗಳ ಜೊತೆಗೆ ಚರ್ಚಿಸಿದ ನಂತರ ಯೋಜನಾ ಆಯೋಗ ಯಾವ ಯೋಜನೆಗೆ ಎಷ್ಟು ಹಣ ನೀಡಬೇಕೆಂಬ ಬಗ್ಗೆ ನಿರ್ಧರಿಸುತ್ತದೆಂದು ತಿಳಿಸಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಹಣ ಮಂಜೂರು ಮಾಡಿದೆ ಎಂಬ ವರದಿಯ ಬಗ್ಗೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಚಂದ್ರಬಾಬು ನಾಯ್ಡುರವರು ಆಕ್ಷೇಪವೆತ್ತಿ ಬರೆದಿರುವ ಪತ್ರದ ಬಗ್ಗೆ ಪ್ರಧಾನಿಯವರು ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ'' ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ನಾನು ಏನು ಹೇಳುತ್ತಿದ್ದೇನೆಂದರೆ, ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಹಣ ಬರುತ್ತದೆಂದು ರಾಜ್ಯದ ಭಾರಿ ನೀರಾವರಿ ಸಚಿವರು ಮತ್ತು ಮುಖ್ಯಮಂತ್ರಿಗಳು ಒಂದು ಕಡೆ ಹೇಳಿದರೆ, ಇನ್ನೊಂದು ಕಡೆ ಹಣ ಇನ್ನೂ ಮಂಜೂರು ಮಾಡಿಲ್ಲವೆಂದು ಹೇಳುತ್ತಾರೆ. ಮತ್ತೊಂದು ಕಡೆ ಏನು ಹೇಳುತ್ತಾರೆಂದರೆ, ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಹೊಸದಾಗಿ ಸ್ಥಾಪಿಸಲಾಗಿರುವ ಒಂದು ಸಾವಿರ ಕೋಟಿ ರೂಪಾಯಿಗಳ ಮೊತ್ತದ ಕ್ಷಿಪ್ರ ನೀರಾವರಿ ಯೋಜನೆಯಲ್ಲಿ ಕರ್ನಾಟಕದ ಕೃಷ್ಣಾ ಮೇಲ್ದಂಡೆ ಯೋಜನೆಗೆ ಇನ್ನೂರು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುವ ಕೇಂದ್ರ ಸರ್ಕಾರದ ಕ್ರಮಕ್ಕೆ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು. ಒಂದು ಕಡೆ ಹಣ ಮಂಜೂರು ಮಾಡಿದೆ ಎಂದು ಹೇಳುತ್ತಾರೆ, ಮತ್ತೊಂದು ಕಡೆ ಪ್ರಧಾನಮಂತ್ರಿಗಳು ಇನ್ನೂ ಹಣವನ್ನು ಮಂಜೂರು ಮಾಡಿಲ್ಲವೆಂದು ಹೇಳುತ್ತಾರೆ. ಅಲ್ಲದೆ, ಹಣವನ್ನು ಮಂಜೂರು ಮಾಡಿದರೆ ಸಂಯುಕ್ತ ರಂಗಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಂಡು ಹೊರಗಡೆ ಬರಬೇಕಾಗುತ್ತದೆ ಎಂಬ ಬೆದರಿಕೆಯನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಒಡ್ಡುತ್ತಿದ್ದಾರೆ. ಇದು ಸರಿಯಾದ ನೀತಿಯಲ್ಲ. ಈ ನೀತಿಯ ವಿರುದ್ಧ ಸರ್ಕಾರದ ನಿಲುವೇನೆಂದು ಸ್ಪಷ್ಟಪಡಿಸಬೇಕು. ಇನ್ನೂರು ಕೋಟಿ ರೂಪಾಯಿಗಳ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನು? ಆ ಹಣ ಬರುತ್ತದೆಯೇ? ಕೇಂದ್ರ ಸರ್ಕಾರ ಕೊಡುತ್ತದೆಯೇ ಎಂಬುದರ ಬಗ್ಗೆ ತೀರ್ಮಾನವಾಗಲಿ. ಪ್ರಧಾನಮಂತ್ರಿಗಳು ಹೇಳಿರುವ ಪ್ರಕಾರ ಯಾವುದು ಸರಿ ಎಂಬುದನ್ನು ಸ್ಪಷ್ಟ ಪಡಿಸಬೇಕು.

+ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ದಿನಾಂಕ 26ನೇ ಜುಲೈ, 1996ರಂದು ಕೇಂದ್ರ ಸರ್ಕಾರದ ಅಡ್ವೈಸರಿ ಇರಿಗೇಷನ್ ಅಂಡ್ ಕಾಡಾ ಡಿಪಾರ್ಟ್‌ಮೆಂಟಿನಿಂದ ನಮಗೆ ಒಂದು ಪತ್ರ ಬಂದಿತ್ತು.

> "While presenting the union budget for 1996-97, the Union Finance Minister has announced "Accelerated Irrigation Benefit Programme" for which an allocation of Rs. 800/-crores has been proposed for the year 1996-97 for selected large Irrigation Multipurpose projects each with an estimated cost exceeding Rs. 1000/-crores. Also additional Rs. 100/-crores in

the current financial year for irrigation projects, where with just a little additional resources and assured water supply to one lakh Hectares, has been proposed. Further, the Union Finance Minister has also announced that the details of these two programmes would be announced by the Planning Commission in the next few days. I would be thankful if you could kindly advise the concerned Secretary to identify such projects and submit the proposals along with the details as per the enclosed proforma for consideration of the Planning Commission for its inclusion in the announced programmes. I would request you to treat this letter on top-priority."

ಇದಕ್ಕುತ್ತರವಾಗಿ ಆಗಸ್ಟ್ ಎರಡನೇ ತಾರೀಖಿನಂದು ಅವರು ಈಗಾಗಲೇ ಕಳುಹಿಸಿಕೊಟ್ಟಿದ್ದಂಥ ಪ್ರೊಫಾರ್ಮಾದಲ್ಲಿ ಯಾವ್ಯಾವ ಯೋಜನೆಗಳಿಗೆ ಎಷ್ಟೆಷ್ಟು ಕಾಸ್ಟ್ ಆಗುತ್ತದೆ? ಅವುಗಳ ರಿವೈಸ್ಡ್ ಕಾಸ್ಟ್ ಎಷ್ಟು? ಎಷ್ಟು ಆಚ್ಚುಕಟ್ಟು ಪ್ರದೇಶ ಒಳಪಡುತ್ತದೆ? ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಎರಡಕ್ಕೂ ಮಾಹಿತಿ ಕಳುಹಿಸಿಕೊಟ್ಟಿದ್ದೇವೆ. ಅಲ್ಲದೆ, ನಿನ್ನೆ ದಿವಸ ದೆಹಲಿಯಲ್ಲಿ ಸಂಬಂಧಪಟ್ಟ ಮಂತ್ರಿಗಳೂ ಸಭೆ ನಡೆಸಿರುವುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಆದುದರಿಂದ, ಇದಕ್ಕೋಸ್ಕರವಾಗಿ ಯೋಜನೆಗಳ ಬಗ್ಗೆ ತೀರ್ಮಾನಿಸಿ ತೆಗೆದುಕೊಂಡು ಹೋಗುವ ಹಂತದಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿರುವುದರ ಬಗ್ಗೆ ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಅಷ್ಟು ಬಿಟ್ಟು ನನಗೆ ಈ ವಿಚಾರದಲ್ಲಿ ಹೆಚ್ಚು ಮಾಹಿತಿ ಇಲ್ಲ. ಈಗ ನನಗೆ ಮಾನ್ಯ ಪ್ರಧಾನ ಮಂತ್ರಿಗಳ ಕಛೇರಿಯಿಂದ ಒಂದು ಫ್ಯಾಕ್ಸ್ ಮೆಸೇಜ್ ಬಂದಿದೆ.

"Chief Minister, Andhra Pradesh, Chief Minister, Karnataka Chief Minister, Maharashtra, Irrigation Ministers of three States, Chief Secretaries of those States:

PM is holding a meeting on Saturday, 10-8-96 at 6 p. m at Parliament House Annexe with the Chief Ministers and concerned Irrigation Ministers. Matter relating to projects in Krishna River Basin. P.M would wish the Chief Ministers and Irrigation Ministers of A. P., Karnataka and Maharashtra to attend the meeting. It is also desired that the Leader of Opposition of each House of legislature may also be requested to attend the meeting."

ಎನ್ನುವ ಫ್ಯಾಕ್ಸ್ ಸಂದೇಶ ಮಾನ್ಯ ಪ್ರಧಾನ ಮಂತ್ರಿಗಳ ಕಛೇರಿಯಿಂದ ನಮಗೆ ಬಂದಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು, ಎರಡೂ ಸದನಗಳ

ನಾಯಕರುಗಳು ಹಾಗೂ ಇರಿಗೇಷನ್ ಮಂತ್ರಿಗಳು, ನಾವೆಲ್ಲರೂ ಸಹ ನಾಳೆ ಅವರು ಕರೆದಿರ ತಕ್ಕಂತಹ ಮೀಟಿಂಗ್‌ಗೆ ಹೋಗುತ್ತಿದ್ದೇವೆ. ಇದರ ಬಗ್ಗೆ ನಾವು ಪ್ರಪೋಸಲ್ ಕಳುಹಿಸಿಕೊಟ್ಟಿದ್ದೇವೆ. ಅದು ಇಡೀ ನಮ್ಮ ರಾಜ್ಯಕ್ಕೊಂದೇ ಅಲ್ಲ, ಇಡೀ ನಮ್ಮ ದೇಶದ ಎಲ್ಲಾ ರಾಜ್ಯಗಳಿಗೂ ಅನ್ವಯವಾಗ ತಕ್ಕಂತಹ ಯೋಜನೆಯಾಗಿದೆ. ಆ ಯೋಜನೆಗೆ ಅವರು ಒಟ್ಟು 900 ಕೋಟಿ ರೂ. ಗಳನ್ನು ಇಟ್ಟಿದ್ದಾರೆ. ಆದರಲ್ಲಿ ನಮಗೆ ಎಷ್ಟು ಕೊಡುತ್ತಾರೆ ಎಂಬುದು ನಮಗೆ ಗೊತ್ತಿಲ್ಲ. ನಮ್ಮ ಯೋಜನೆಗಳ ಬಗ್ಗೆ ನಾವೆಲ್ಲಾ ಡೀಟೈಲ್ ಅವರಿಗೆ ಕೊಟ್ಟಿದ್ದೇವೆ. ನಮಗೆ ಎಷ್ಟು ಹಣವನ್ನು ಆ ಯೋಜನೆಯಡಿ ಕೊಡ ಬೇಕೆಂದು ಅವರೇ ಫೈನಲ್ ಮಾಡುತ್ತಾರೆ. ನಮಗೆ 200 ಕೋಟಿ ರೂ. ಗಳಷ್ಟು ನೆರವು ಆ ಯೋಜನೆಯಿಂದ ಬರುತ್ತದೆ ಎಂದು ಆಸೆ ಇಟ್ಟುಕೊಂಡಿದ್ದೇವೆ ಎಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳುತ್ತಿದ್ದೇನೆ. ಮೊದಲಿಗೆ ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ತಮ್ಮ ವಿಷಯವನ್ನು ಪ್ರಸ್ತಾಪಿಸಬೇಕು.

**ಶ್ರೀ ವಾಟಾಳ್ ನಾಗರಾಜ್:-** ಮಾನ್ಯ ಉಪಾಧ್ಯಕ್ಷರೇ. . .

ಉಪಾಧ್ಯಕ್ಷರು:- ಮಾನ್ಯ ಭಾರಿ ನೀರಾವರಿ ಮಂತ್ರಿಗಳು ಈಗಾಗಲೇ ಉತ್ತರಕೊಟ್ಟಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಾಟಾಳ್ ನಾಗರಾಜ್:-** ವಿರೋಧ ಪಕ್ಷದ ಮುಖಂಡರುಗಳು ಅಂದರೆ ಯಾರು, ಏನು ಎಂಬುದನ್ನು ಹೇಳಿ. ಎಲ್ಲಿ. . .

ಉಪಾಧ್ಯಕ್ಷರು:- ಅವರು ಯಾರಿದ್ದಾರೆ. . .

**ಶ್ರೀ ಕೆ.ಎನ್. ನಾಗೇಗೌಡ:-** ನಾನು ಆಗಲೇ ತಮಗೆ ಹೇಳಿದೆ. The Leader of Opposition of each House of State Legislature may also be requested to attend. ಇಲ್ಲಿನ ವಿರೋಧ ಪಕ್ಷದ ನಾಯಕರು ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನು ತಾವು ಸಭೆಗೆ ಕರೆಯಬೇಕು ಎಂದು ನಮಗೆ ಸೂಚನೆ ಬಂದಿದೆ.

**ಶ್ರೀ ವಾಟಾಳ್ ನಾಗರಾಜ್:-** ಸಾರ್ ಈಗ ಅವರು. . .

ಉಪಾಧ್ಯಕ್ಷರು:- ಮತ್ತೆ ಇದರ ಬಗ್ಗೆ ಚರ್ಚೆ ಮಾಡುವ ಅಗತ್ಯವಿಲ್ಲ.

**ಶ್ರೀ ವಾಟಾಳ್ ನಾಗರಾಜ್:-** ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳ ಪ್ರತಿಭಟನೆಗೆ ಅವರು ಏನು ಉತ್ತರ. . .

ಉಪಾಧ್ಯಕ್ಷರು:- ಮಾನ್ಯ ಭಾರಿ ನೀರಾವರಿ ಮಂತ್ರಿಗಳು ಆಗಲೇ ಮಾನ್ಯ ಪ್ರಧಾನ ಮಂತ್ರಿಗಳ ಕಡೆಯಿಂದ ತಮಗೆ ಬಂದಂತಹ ಪತ್ರವನ್ನು ಇಲ್ಲಿ ಓದಿ ಹೇಳಿದ್ದಾರೆ. ಯಾರ್ಯಾರಿಗೆ ಆಹ್ವಾನ ಕಳುಹಿಸಿ ಕೊಟ್ಟಿದ್ದಾರೆ, ಅವರೆಲ್ಲರನ್ನೂ ಅವರು ಕರೆದುಕೊಂಡು ಸಭೆಗೆ ಹೋಗುತ್ತಾರೆ. ಮತ್ತೆ ಬೇರೆ ಏನು ಹೇಳಬೇಕು ನಿಮಗೆ. ಇದರ ಚರ್ಚೆ ಸಾಕು.